## ಫೇಸ್‌ಬುಕ್ | ವಾಟ್ಸ್‌ಆ್ಯಪ್ | ಇನ್‌ಸ್ಟಾಗ್ರಾಂ

# 6 ತಾಸು ತಲ್ಲಣ!

■ **ಶಶಿಕುಮಾರ್ ಸಿ.**



'ತಂತ್ರಜ್ಞಾನದ ಮೇಲಿನ ಅವಲಂಬನೆಯ ಹಾದಿಯು ಕ್ಷಣಕಾಲ ತಪ್ಪಿದರೂ ಲೆಕ್ಕಚಾರವೆಲ್ಲ ಬುಡಮೇಲು' ಎಂಬುದಕ್ಕೆ ಮಾರ್ಕ್ ಜುಕರ್‌ಬರ್ಗ್ ಒಡೆತನದ ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಇನ್‌ಸ್ಟಾಗ್ರಾಂಗೆ ಎದುರಾದ ತಾಂತ್ರಿಕ ಸಮಸ್ಯೆ ತಾಜಾ ಉದಾಹರಣೆ. ಈಚೆಗೆ ಈ ಆ್ಯಪ್‌ಗಳು ಸ್ಥಗಿತಗೊಂಡಿದ್ದು ಕೇವಲ ಆರು ಗಂಟೆ. ಆದರೆ ಸಂಭವಿಸಿದ ನಷ್ಟ ₹ 45,000 ಕೋಟಿ!

ತಂತ್ರಜ್ಞಾನದ ಮೇಲೆ ಅತಿ ಅವಲಂಬನೆಯ ಮನಸ್ಥಿತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಮಾರ್ಕ್ ಜುಕರ್‌ಬರ್ಗ್‌ರಂಥ ಉದ್ಯಮಿಗಳು, ತಂತ್ರಜ್ಞಾನದ ಮೇಲೆ ಇನ್ನಷ್ಟು ಅವಲಂಬನೆಯಾಗಲು ಜನರನ್ನು ಪ್ರೇರೇಪಿಸುವಂತಹ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಅವರಿಗೆ ಉಣಬಡಿಸುತ್ತಿದ್ದಾರೆ. ಅದರ ಪ್ರತಿಫಲವೇ ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಇನ್‌ಸ್ಟಾಗ್ರಾಂ ಬಳಕೆದಾರರ ಸಂಖ್ಯೆ ಜಗತ್ತಿನಾದ್ಯಂತ 300 ಕೋಟಿ ಮೀರಿರುವುದು.

**ಕರಗಿದ್ದು ₹45000 ಕೋಟಿ**

ಫೇಸ್‌ಬುಕ್ ಸೇರಿದಂತೆ ತನ್ನ ಒಡೆತನದ ಎಲ್ಲ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಆರು ಗಂಟೆಗಳ ಕಾಲ ಎದುರಾಗಿತ್ತು. ಈ ನಡುವೆ ಆ್ಯಪ್‌ಗಳಲ್ಲಿ ಕಾರ್ಯನಿರ್ವಹಿಸಲು ಬಳಕೆದಾರರಿಗೆ ಸಾಧ್ಯವಾಗಲಿಲ್ಲ. ಅಂದರೆ, ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್‌ಗಳನ್ನು ಹಾಕಲು, ಯಾವುದೇ ರೀತಿಯ ಸಂದೇಶವನ್ನು ತನ್ನ ಆತ್ಮೀಯರೊಂದಿಗೆ ಹಂಚಿಕೊಳ್ಳಲೂ ಆಗಲಿಲ್ಲ.

ಸ್ಥಗಿತದ ಕಾರಣಕ್ಕೆ ಫೇಸ್‌ಬುಕ್‌ನ ಷೇರುಗಳು ಜಾಗತಿಕ ಮಟ್ಟದಲ್ಲಿ ಶೇಕಡ 4.9ರಷ್ಟು (6 ಬಿಲಿಯನ್ ಡಾಲರ್) ಕುಸಿದಿವೆ. ಅದರ ಪರಿಣಾಮ ವಿಶ್ವದ ಶ್ರೀಮಂತ ವ್ಯಕ್ತಿಗಳ ಪಟ್ಟಿಯಿಂದ ಜುಕರ್‌ಬರ್ಗ್ ಒಂದು ಮೆಟ್ಟಿಲು ಕೆಳಗಿಳಿದ್ದು, ಸದ್ಯ 5ನೇ ಸ್ಥಾನದಲ್ಲಿದ್ದಾರೆ. ಅವರ ಸಂಪತ್ತಿನ ಮೌಲ್ಯ 9 ಲಕ್ಷಕೋಟಿಗೆ ಇಳಿದಿದೆ. ಇದಕ್ಕೂ ಮುಂಚೆ ಅವರ ಸಂಪತ್ತಿನ ಮೌಲ್ಯ ₹10.5 ಲಕ್ಷ ಕೋಟಿ ಇತ್ತು.

### ಸಮಸ್ಯೆಗೆ ವಾಸ್ತವ ಕಾರಣ?

ತಾಂತ್ರಿಕ ಸಮಸ್ಯೆಗೆ ಕಾರಣ ಸರ್ವರ್ ಡೌನ್ ಎಂದು ಪ್ರಾರಂಭದಲ್ಲಿ ಹೇಳಲಾಗಿತ್ತು. ಆದರೆ ಅದಕ್ಕೆ ಸರ್ವರ್ ಡೌನ್ ಒಂದೇ ಕಾರಣವಲ್ಲ. ವಾಸ್ತವವಾಗಿ ಈ ಆ್ಯಪ್‌ಗಳಿಗೆ ತಲೆನೋವು ತಂದಿಟ್ಟದ್ದೇ 'ಡಿಎನ್‌ಎಸ್' ಮತ್ತು 'ಬಿಜಿಪಿ' ತಂತ್ರಾಂಶ.

'ಡಿಎನ್‌ಎಸ್' ಅಂದರೆ 'ಡಾಮಿನ್ ನೇಮ್ ಸಿಸ್ಟಮ್'. ಇದನ್ನು ಫೋನ್ ಬ್ಯಾಂಕ್ ಆಫ್ ಇಂಟರ್‌ನೆಟ್ ಎಂದೂ ಕರೆಯಲಾಗುತ್ತದೆ. ಫೇಸ್‌ಬುಕ್ ಡಾಟ್‌ಕಾಮ್‌ನಲ್ಲಿ ಈ 'ಡಿಎನ್‌ಎಸ್'ಗಳೇ ಐಪಿ ಅಡ್ರೆಸ್‌ಗಳಾಗಿ ಬದಲಾಗಿ ಕಾರ್ಯ ನಿರ್ವಹಿಸುತ್ತವೆ. 'ಬಿಜಿಪಿ' ಅಂದರೆ 'ಬಾರ್ಡರ್ ಗೇಟ್ ವೇ ಪ್ರೊಟೋಕಾಲ್' ಅಂತ. ಈ 'ಡಿಎನ್‌ಎಸ್' ಮತ್ತು 'ಬಿಜಿಪಿ' ವ್ಯವಸ್ಥೆಗಳೇ ಫೇಸ್‌ಬುಕ್‌ನ ಮಾಹಿತಿ ತಂತ್ರಜ್ಞರಿಗೆ ನಡುಕ ಹುಟ್ಟಿಸಿದ್ದು.

'ಡಿಎನ್‌ಎಸ್' ಮತ್ತು 'ಬಿಜಿಪಿ'ಯ ಕಾರ್ಯವಿಧಾನದಲ್ಲಿ 'ಡಿಎನ್‌ಎಸ್' ಇಂಟರ್‌ನೆಟ್ ಫೋನ್ ಬುಕ್ ಆಗಿ ಕೆಲಸ ಮಾಡಿದರೆ, 'ಬಿಜಿಪಿ' ನ್ಯಾವಿಗೇಷನ್ ಸಿಸ್ಟಮ್ ಆಗಿ ಕಾರ್ಯ ನಿರ್ವಹಿಸುತ್ತದೆ. ಈ 'ಬಿಜಿಪಿ'ಯಲ್ಲಿ ಐಪಿ ಅಡ್ರೆಸ್ ಮತ್ತು 'ಡಿಎನ್‌ಎಸ್' ನೇಮ್ ಸರ್ವರ್‌ಗಳನ್ನು ಒಳಗೊಂಡಿರುತ್ತದೆ. ಯಾವ ಮಾರ್ಗದಲ್ಲಿ ಡೇಟಾ ವೇಗವಾಗಿ ತಲುಪಬೇಕು ಎಂಬುದನ್ನು 'ಬಿಜಿಪಿ' ನಿರ್ಧರಿಸುತ್ತದೆ. 'ಡಿಎನ್‌ಎಸ್' ರೆಸಲ್ಯೂಷನ್ ವಿಫಲವಾದ ಕಾರಣಕ್ಕೆ ಜಾಗತಿಕ ಮಟ್ಟದಲ್ಲಿ ಫೇಸ್‌ಬುಕ್‌ನ ಕಾರ್ಯವಿಧಾನದಲ್ಲಿ ನೆಟ್‌ವರ್ಕ್ ಟ್ರಾಫಿಕ್ ಸಮಸ್ಯೆ ಎದುರಾಗಿ ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಸ್ಥಗಿತಗೊಂಡಿದ್ದವು.

ಈ ಆ್ಯಪ್‌ಗಳ ಪೈಕಿ ಯಾವುದಾದರೂ ಒಂದು ಆ್ಯಪ್ ತೆರೆದು ಮೆಸೇಜ್ ಅಥವಾ ಪೋಸ್ಟ್ ಹಾಕುವಾಗ ಡೇಟಾ ಸಂಚಾರಕ್ಕಾಗಿ ಬಳಕೆದಾರರ ಸಾಧನದಿಂದ ಸ್ಥಳೀಯ ಡೇಟಾ ಕೇಂದ್ರಗಳಿಗೆ ಅವುಗಳೇ ಅನುಮತಿ ಕೋರುತ್ತವೆ. ಡೇಟಾ ಟ್ರಾಫಿಕ್ ಅನ್ನು ನಿರ್ವಹಿಸುವುದು ಈ ರೂಟರ್‌ಗಳು. ಯಾವ ಡೇಟಾ ಕೇಂದ್ರಗಳಿಗೆ ಮಾಹಿತಿ ಕಳುಹಿಸಬೇಕು ಮತ್ತು ಯಾವ ಡೇಟಾ ಕೇಂದ್ರಗಳಿಂದ ಮಾಹಿತಿ ಸ್ವೀಕರಿಸಬೇಕು ಎಂಬುದು ನಿರ್ಧಾರವಾಗುವುದೇ ಇಲ್ಲಿ. ■


ನಿರಂತರ ಸದೃಢ ಆರೋಗ್ಯಕ್ಕಾಗಿ

SDM™ AYURVEDA PHARMACY

ಅಷ್ಟವರ್ಗಯುಕ್ತ

ಚ್ಯವನಪ್ರಾಶ ಲೇಹ






ಹಸಿ ನೆಲ್ಲಿಕಾಯಿ ಯಿಂದಲೇ ತಯಾರಿಸಿದೆ.

- ರೋಗ ನಿರೋಧಕ ಶಕ್ತಿ ಹೆಚ್ಚಿಸಲು
- ವೃದ್ಧಾಪ್ಯದ ಆರೋಗ್ಯ ಸಮಸ್ಯೆ
- ಮಕ್ಕಳ ಬೆಳವಣಿಗೆ

SDM

ಆಯುಷ್ ಕ್ವಾಥ

ಮನೆಯಲ್ಲಿ ಇರಲೇಬೇಕಾದ ಆಯ್ದ ಮೂಲಿಕೆಗಳ ಕಷಾಯ

- ಶೀತ, ನೆಗಡಿ, ಗಂಟಲು ಹಾಗೂ ಕಫ ಬಾಧೆ.
- ಶರೀರದ ಚಯಾಪಚಯ ಪ್ರಕ್ರಿಯೆ ಸುಧಾರಣೆ.
- ಎಲ್ಲಾ ವಯಸ್ಸಿನವರಿಗೆ ಉಪಯುಕ್ತ.




ತಯಾರಕರು

SDM

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ

ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ

ISO 9001:2015 & GMP CERTIFIED

Email: sdmaph@sdmayurvedacollegeudupi.in
Customer Care: +91 8970977513

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.